ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ವಿಧಾನ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ವಿಶ್ವವಾಣಿ ದಿನಾಂಕ : DATE : 24/07/2019

# ಜೇಬಿನಲ್ಲಿ ರಾಜೀನಾಮೆ ಪತ್ರದೊಂದಿಗೆ ಸದನಕ್ಕೆ ಸ್ಪೀಕರ್

ಬೆಂಗಳೂರು: ವಿಶ್ವಾಸಮತ ನಿರ್ಣಯದ ದಿನವಾದ ಮಂಗಳವಾರದಂದು ಸ್ಪೀಕರ್ ರಮೇಶ್ ಕುಮಾರ್ ತಮ್ಮ ಜೇಬಿನಲ್ಲಿ ರಾಜೀನಾಮೆ ಪತ್ರದೊಂದಿಗೆ ಸದನಕ್ಕೆ ಹಾಜರಾಗಿದ್ದರು.

ಅತೃಪ್ತ ಶಾಸಕರ ರಾಜೀನಾಮೆ ವಿಳಂಬ ಮಾಡುವ ಮೂಲಕ ಪಕ್ಷಪಾತ ಮಾಡುತ್ತಿದ್ದಾರೆ ಎಂದು ಜೆಡಿಎಸ್ ಶಾಸಕ ಎಚ್.ವಿಶ್ವನಾಥ್ ಆರೋಪ ಮಾಡಿದ್ದರ ಬಗ್ಗೆ ವಿಶ್ವಾಸಮತ ನಿರ್ಣಯದ ಮೇಲಿನ ಚರ್ಚೆ ವೇಳೆ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಸದನದಲ್ಲಿ ಪ್ರಸ್ತಾಪಿಸಿದರು.



ವಿಶ್ವನಾಥ್ ವಿರುದ್ಧ ಗರಂ ಆದ ಸ್ಪೀಕರ್, 'ನನ್ನ ಹಾಗೆ ಜೀವನ ನಡೆಸಲು ಅವರಿಗೆ ನೂರು ಜನ್ಮ ಬೇಕು. ರಾಜೀನಾಮೆ ಪತ್ರ ಯಾವ ರೀತಿ ಕೊಡಬೇಕು ಎನ್ನುವ ವಿವೇಚನೆ ಇಲ್ಲದವರು ನನ್ನ ಬಗ್ಗೆ ಮಾತನಾಡುತ್ತಾರೆ' ಎಂದು ಕಿಡಿಕಾರಿದರು. ಒಂದು ವಾರದಿಂದ ತಮ್ಮ ಬಗ್ಗೆ ಇಲ್ಲಸಲ್ಲದ ಆರೋಪಗಳು ಕೇಳಿಬರುತ್ತಿರುವುದನ್ನು ಕೇಳಿ ಮನಸಿಗೆ ಬಹಳ ನೋವಾಗಿದೆ. ಮುಂದಿನ ದಿನಗಳಲ್ಲಿ ನಾನು ಸ್ಪೀಕರ್ ಆಗಿ ಇರುತ್ತೇನೋ ಇಲ್ಲವೋ ಎಂಬುದು ನನ್ನ ವಿವೇಚನೆಗೆ ಬಿಟ್ಟಿದ್ದು. ಅವರು ವಾಪಸು ಬರುತ್ತಾರೋ ಇಲ್ಲವೋ ಗೊತ್ತಿಲ್ಲ, ಆದರೆ ಸದನವನ್ನು ತಪ್ಪು ದಾರಿಯಲ್ಲಿ ತರುವಂತಹ ಪ್ರಯತ್ನ ಮಾಡಬಾರದು. ಈ ರೀತಿ ಮಾತನಾಡುವುದು ಸಭಾ ನಿಂದನೆ. ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ ಎಂದರೆ ಹೇಗೆ ? ರಾಜೀನಾಮೆ ಪತ್ರವನ್ನು ನಾನು ಜೇಬಿನಲ್ಲಿ ಇಟ್ಟುಕೊಂಡೇ ಬಂದಿದ್ದೇನೆ. ಬೆಳಗ್ಗೆಯಿಂದ ಜೇಬಿನಲ್ಲಿ ರಾಜೀನಾಮೆ ಪತ್ರ ಇಟ್ಟುಕೊಂಡು ಓಡಾಡುತ್ತಿದ್ದೇನೆ ನೋಡಿ ಯಡಿಯೂರಪ್ಪನವರೇ ಎಂದು ಮಾರ್ಷಲ್ ಮೂಲಕ ಯಡಿಯೂರಪ್ಪ ಅವರಿಗೆ ತಮ್ಮ ಜೇಬಿನಲ್ಲಿದ್ದ ರಾಜೀನಾಮೆ ಪತ್ರ ನೀಡಿದರು.

ಯಾವುದೇ ಘಳಿಗೆಯಲ್ಲಿಯೂ ನನ್ನ ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ರಾಜೀನಾಮೆ ನೀಡಬೇಕೆಂದು ರಾಜೀನಾಮೆ ಪತ್ರ ಇಟ್ಟುಕೊಂಡಿದ್ದೇನೆ. ದೇವರಾಜ್ ಅರಸು ಅವರನ್ನು ನಡುದಾರಿಯಲ್ಲಿ ಬಿಟ್ಟುಹೋದ ನಾಯಕರು ನನ್ನ ವಿರುದ್ಧ ಮಾತನಾಡುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಘಟನೆ ನಡೆಯಿತು.